

ಮೊಡವೆಗಳು ಒಣಗಿ ಹೋಗುತ್ತವೆ.

ಒಂದು ಚಮಚ ಪ್ರಮಾಣದ ಅಗರ್ ತೈಲ ಮತ್ತು ಜೇನುತುಪ್ಪ, ಚಿಟಿಕೆ ಹಸುವಿನ ಬೆಣ್ಣೆಯನ್ನು ಬಿಳಿ ದಾಸವಾಳದ ಎಲೆಗಳನ್ನು ಕಿವುಚಿದ ನೀರಿನಲ್ಲಿ ಮಿಶ್ರಗೊಳಿಸಬೇಕು. ಇದರಿಂದ ಮೈ ತೊಳೆದುಕೊಳ್ಳುವುದರಿಂದ ಬೆವರು ಗುಳ್ಳೆಗಳು ಕೂಡಲೇ ಮಾಯವಾಗುತ್ತವೆ.

ಹಲ್ಲುಗಳ ಕಾಂತಿಗೆ

ಹಲ್ಲುಗಳಲ್ಲಿ ಹಳದಿ ಪಾಚಿ ಕಟ್ಟಿಕೊಂಡರೆ ನಗುವಾಗ ಮುಜುಗರವಾಗುತ್ತದೆ. ಇದರೊಂದಿಗೆ ಉಸಿರಾಟದಲ್ಲಿ ದುರ್ಗಂಧ ಬೆರೆತಿದ್ದರೆ ಬೇರೆಯವರ ಮುಂದೆ ಮಾತನಾಡುವುದು ಕಷ್ಟವಾಗುತ್ತದೆ. ಒಂದೆರಡು ಹನಿ ಅಗರ್ ತೈಲ ಮತ್ತು ಪೆಪ್ಪರ್ಮಿಂಟ್ ಜೆಲ್ ಮಿಶ್ರಣ ಮಾಡಿ ವಸಡುಗಳಿಗೆ ಲೇಪಿಸಿಕೊಂಡರೆ ಸಾಕು, ಬೇರೆಯವರೊಂದಿಗೆ ನಿರ್ಭಯವಾಗಿ ಬೆರೆಯಬಹುದು. ಇಡೀ ದಿನ ಬಾಯಿಯೊಳಗೆ ಮೌತ್ ವಾಷರ್ ತರ ಕೆಲಸ ಮಾಡುತ್ತ ಉಸಿರಾಟದಲ್ಲಿ ಸುಗಂಧವನ್ನು ತುಂಬುತ್ತದೆ. ಇನ್ನು ಹಲ್ಲುಗಳ ಕಾಂತಿಗೆ ಒಂದು ಚಮಚ ಲಿಂಬೆರಸ, ನಾಲ್ಕು ಹನಿ ಅಗರ್ ತೈಲ, ಚಿಟಿಕೆ ಸೈಂದುಪ್ಪುಗಳನ್ನು ಕಲಸಿ ಬ್ರಷ್ ಮೂಲಕ ಹಲ್ಲುಗಳಿಗೆ ಹಚ್ಚಿ ತಿಕ್ಕುವುದರಿಂದ ಕೆಲವೇ ದಿನಗಳಲ್ಲಿ ಹೊಳೆಯುವ ಹಲ್ಲುಗಳು ಪಾಚಿಮುಕ್ತವಾಗುತ್ತವೆ. ಎರಡು ಹನಿ ಪುದೀನಾ ರಸ ಮತ್ತು ಎರಡು ಹನಿ ಅಗರ್ ತೈಲಗಳನ್ನು ಲಿಂಬೆಹಣ್ಣಿನ ರಸ ಹಿಂಡಿದ ಸಿಪ್ಪೆಗೆ ಲೇಪಿಸಿ ಹಲ್ಲುಗಳನ್ನು ತಿಕ್ಕಿಕೊಳ್ಳುವುದು ಕೂಡ ಹಲ್ಲುಗಳ ಹಳದಿ ನಿವಾರಿಸಲು ಸಹಕಾರಿ.

ತುಟಿಗಳು ಒರಟಾಗಿದ್ದು ಕಪ್ಪುಬಣ್ಣವಾಗಿದ್ದರೆ ಎರಡು ಹನಿ ಅಗರ್ ತೈಲ, ಅರ್ಧ ಚಮಚ ತುಪ್ಪ ಮತ್ತು ದಾಳಿಂಬೆಯ ರಸಗಳನ್ನು ಮಿಶ್ರಗೊಳಿಸಿ ಬೆಳಗ್ಗೆ ಮತ್ತು ಸಂಜೆ ತುಟಿಗಳ ಮೇಲೆ ಸವರಿ, ನಡು ಬೆರಳಿನಿಂದ ಹಗುರವಾಗಿ ಉಜ್ಜಬೇಕು. ಈ ಮಿಶ್ರಣವನ್ನು ತುಟಿಗಳು ಹೀರಿಕೊಂಡ ಬಳಿಕ ಉಜ್ಜುವುದನ್ನು ನಿಲ್ಲಿಸಬೇಕು. ಒಂದು ವಾರ ಕಳೆದಾಗ ಮೃದುವಾದ ನಸುಗೆಂಪಿನ ತುಟಿಗಳ ಭಾಗ್ಯ ಒಲಿಯಬಹುದು.

## ಸುಂದರ ಕೇಶರಾಶಿಗೆ

ಕಪ್ಪು ಕಪ್ಪಾಗಿರುವ ಕೇಶ ಸೌಂದರ್ಯ ಪಡೆಯಲು ಅಗರ್ ಮರದ ಐದು ಎಲೆಗಳನ್ನು ತಂದು ಹಸಿಯಿರುವಾಗಲೇ ಅರೆಯಬೇಕು. ಅದನ್ನು ಎರಡು ಲೀಟರ್ ನೀರಿನಲ್ಲಿ ಬೆರೆಸಿ ಕುದಿಸಿ ಅರ್ಧಭಾಗಕ್ಕಿಳಿದಾಗ ಅರ್ಧ ಲೀಟರ್ ತೆಂಗಿನೆಣ್ಣೆ, ಹಸುವಿನ ಹಾಲು ಅರ್ಧ ಕಪ್, ಕಾಡು ಅರಶಿಣ ಪುಡಿ ಅರ್ಧ ಕಪ್, ಭೃಂಗ ಎಲೆಯ ರಸ ಅರ್ಧ ಕಪ್, ನೆಲ್ಲಿಕಾಯಿ ರಸ ಅರ್ಧ ಕಪ್, ಒಂದು ಅಲೊವೆರಾದ ಮಥಿಸಿದ ತಿರುಳು ಸೇರಿಸಿ ಕುದಿಸಬೇಕು. ಬಳಿಕ ಸೋಸಿ ಹತ್ತು ಹನಿ ಅಗರ್ ತೈಲ ಬೆರೆಸಬೇಕು. ಇದನ್ನು ತಲೆಗೂದಲಿಗೆ ದಿನಾಲೂ ಹಚ್ಚಿಕೊಂಡರೆ ತಲೆ ಬೋಳಾಗುವುದಿಲ್ಲ, ಕೂದಲು ನೀಳವಾಗಿ ಕಪ್ಪಾದ ಕಾಂತಿಯನ್ನು ಪಡೆಯುತ್ತದೆ. ಬಾಲ ನರೆಯ ಲಕ್ಷಣವಿದ್ದರೂ ನೀಗುತ್ತದೆ.

ಗುಲಾಬಿ ವರ್ಣದ ತಾವರೆ ಹೂವಿನ ದಳಗಳು, ಒಂದು ಹಿಡಿ ಜಾಜಿ ಮಲ್ಲಿಗೆ ಹೂ, ಅಡುಗೆ ಅರಶಿನದ ಹುಡಿ ಅರ್ಧ ಚಮಚ ಇದಿಷ್ಟನ್ನು ಕಾಲು ಲೀಟರ್ ತೆಂಗಿನೆಣ್ಣೆಯಲ್ಲಿ ಬೆರೆಸಿ ಹತ್ತು ಹನಿ ಅಗರ್ ತೈಲ ಮಿಶ್ರಗೊಳಿಸಬೇಕು. ಈ ಮಿಶ್ರಣವನ್ನು ಬಾಟಲಿಯಲ್ಲಿ ತುಂಬಿಸಿ ಭದ್ರವಾಗಿ ಬಿರಡೆ ಹಾಕಿ ತಂಪಾದ ಜಾಗದಲ್ಲಿಡಬೇಕು. ಒಂದು ತಿಂಗಳ ಬಳಿಕ ಸೋಸಿ, ತಲೆಗೂದಲಿಗೆ ಲೇಪಿಸಿಕೊಳ್ಳುವುದರಿಂದ ಸುಗಂಧಿತ ತಲೆಗೂದಲು, ಕಪ್ಪಾದ ಕಾಂತಿಯಿಂದ ಸಮೃದ್ಧವೂ ಆಗುತ್ತದೆ.

ಅರ್ಧ ಕಪ್ ಚಹಾದ ಕಷಾಯ, ಅರ್ಧ ಕಪ್ ಆಡಿನ ಹಾಲು, ಅರ್ಧ ಬಾಳೆಹಣ್ಣು ಮತ್ತು ಅರ್ಧ ಸೇಬಿನ ಹಣ್ಣುಗಳನ್ನು ಒಟ್ಟು ಮಾಡಿ ಕಲಸಿಕೊಳ್ಳಬೇಕು, ನೆಲ್ಲಿಕಾಯಿ ರಸ ನಾಲ್ಕು ಚಮಚದಷ್ಟು ಇರಲಿ. ಇದಿಷ್ಟನ್ನು ಕಾಲು ಲೀಟರ್ ತೆಂಗಿನೆಣ್ಣೆಗೆ ಬೆರೆಸಿ ಅರ್ಧ ಪ್ರಮಾಣಕ್ಕಿಳಿಯುವ ವರೆಗೆ ಕುದಿಸಬೇಕು. ಆರಿದ ಬಳಿಕ ಸೋಸಿ ಒಂದು ಚಮಚ ಅಗರ್ ತೈಲ ಸೇರಿಸಿ ತಂಪಾದ ಸ್ಥಳದಲ್ಲಿಡಬೇಕು. ಕೇಶರಾಶಿಯ ಸೌಂದರ್ಯ ಪಡೆಯಲು ಇದು ಕೂಡ ಸಹಕಾರಿಯಾಗಿದೆ.

## ಬೆವರಿನ ದುರ್ಗಂಧ ತೊಡೆಯಲು

ಕೆಲವರಿಗೆ ಬೆವರಿದರೆ ಹೆಚ್ಚು ದುರ್ಗಂಧ ಬರುತ್ತದೆ. ಕಂಕುಳಿನ ಭಾಗ ಇನ್ನೂ ಕೆಟ್ಟದಾದ ವಾಸನೆ ಹೊಮ್ಮಿಸುತ್ತದೆ. ಇದರ ನಿವಾರಣೆಗೆ ಐದು ಕಪ್ ಅಗರ್ವುಡ್ ಮರದ ಚಕ್ಕೆಯನ್ನು ಒಂದು ಲೀಟರ್ ನೀರಿಗೆ ಬೆರೆಸಿ ಕುದಿಸಿ ಅರ್ಧ ಪ್ರಮಾಣಕ್ಕಿಳಿಸಬೇಕು. ಇದಕ್ಕೆ ಇಂದು ಚಮಚ ಗಂಧದ ಎಣ್ಣೆ ಸೇರಿಸಿ ಸ್ನಾನವಾದ ಬಳಿಕ ತೆಳ್ಳಗಿನ ಬಟ್ಟೆಯಿಂದ ದೇಹಕ್ಕೆ ಸವರಿಕೊಳ್ಳುವುದರಿಂದ ದೇಹವು ಬೆವರು ವಾಸನೆಯಿಂದ ಮುಕ್ತವಾಗುತ್ತದೆ.

ರೋಸ್, ಜಾಸ್ಮಿನ್, ಗಂಧದ ತೈಲ ಈ ಮೂರರಲ್ಲಿ ಯಾವುದಾದರೂ ಒಂದರ ಜೊತೆಗೆ ಸಮಪ್ರಮಾಣ ಅಗರ್ ತೈಲ ಬೆರೆಸಿ ಲೇಪಿಸಿಕೊಂಡರೆ ಇಡೀ ದಿನ ಮೈಯ ಪರಿಮಳ ಪುಲಕಿತಗೊಳಿಸುತ್ತದೆ.

## ಅಗರ್ ತೈಲ

ಅಗರ್ ಎಂಬ ಸುಗಂಧ ದ್ರವ್ಯದ ಬಗೆಗೆ ಕೇಳದವರಿಲ್ಲ. ಈಗ ದಕ್ಷಿಣ ಕನ್ನಡ, ಮಲೆನಾಡು ಸೇರಿದಂತೆ ಕರ್ನಾಟಕದ ಬಹುಭಾಗದಲ್ಲಿ ಉಪಕೃಷಿಯಾಗಿರುವ ಅಗರ್ ಎಂಬ ಮರದ ರಾಳವೇ ಸುಗಂಧ ದ್ರವ್ಯ. ಒಂದು ಮರವನ್ನು ಕತ್ತರಿಸಿ ಭಟ್ಟಿಯಿಳಿಸಿದರೆ ಸಿಗುವ ರಾಳದ ಪ್ರಮಾಣ ಕೇವಲ ಹದಿನೈದು ಗ್ರಾಮ್ ಮಾತ್ರ. ಹೀಗಾಗಿ ರಾಳದಿಂದ ತೆಗೆಯುವ ತೈಲಕ್ಕೆ ಚಿನ್ನದ ದ್ರವ ಎಂದು ಕರೆಯುತ್ತಾರೆ. ದುಬಾರಿ ಬೆಲೆಯಾದರೂ ಇದನ್ನು ಮೀರಿಸಿದ ಸುಗಂಧ ತೈಲವೇ ಇಲ್ಲ. ಹೆಂಗಳೆಯರ ತ್ವಚೆಯ ಕಾಂತಿಯನ್ನು ಸಂವರ್ಧಿಸುತ್ತದೆ. ■